## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : | 1213 |
| ಸದಸ್ಯರ ಹೆಸರು : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ : | 16-03-2021 |
| ಉತ್ತರಿಸುವವರು : | ಪೌರಾಡಳಿತ ಮತ್ತು ಸಕ್ಕರೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪೌರಾಡಳಿತ ಇಲಾಖೆಯಡಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಎಷ್ಟು;(ವಿವರ ಒದಗಿಸುವುದು) | ಪೌರಾಡಳಿತ ಇಲಾಖಾ ವ್ಯಾಪ್ತಿಯಲ್ಲಿ ಪ್ರಸ್ತುತ 10 ಮಹಾನಗರಪಾಲಿಕೆಗಳು, 59 ನಗರಸಭೆಗಳು, 120 ಪುರಸಭೆಗಳು ಹಾಗೂ 110 ಪಟ್ಟಣ ಪಂಚಾಯಿತಿಗಳಿದ್ದು, ವಿವರವನ್ನು ಅನುಬಂಧ-1ರಲ್ಲಿ ನೀಡಿದೆ. (ಪ್ರತಿ ಲಗತ್ತಿಸಿದೆ). |
| ಆ | ಸದರಿ ಪುರಸಭೆಗಳು ಪಟ್ಟಣಗಳು ಅನುಭವಿಸುತ್ತಿರುವ ಪ್ರಮುಖ ಸಮಸ್ಯೆಗಳೇನು; | ನಗರ ಸ್ಥಳೀಯ ಸಂಸ್ಥೆಗಳು ಅನುಭವಿಸುತ್ತಿರುವ ಪ್ರಮುಖ ಸಮಸ್ಯೆಗಳು ಈ ಕೆಳಕಂಡಂತಿವೆ:-<br>1. ಕುಡಿಯುವ ನೀರಿನ ಸಮಸ್ಯೆ<br>2. ಒಳಚರಂಡಿ ಮತ್ತು ಸೆಪ್ಟೇಜ್ ನಿರ್ವಹಣೆ<br>3. ರಸ್ತೆ ಮತ್ತು ಚರಂಡಿ ಕೊರತೆ<br>4. ರಾಜ್ಯದ ನ.ಸ್ಥ.ಸಂಸ್ಥೆಗಳಲ್ಲಿ ಪಾರಂಪರಿಕ ತ್ಯಾಜ್ಯ ವಿಲೇವಾರಿ ಸಮಸ್ಯೆ, ಘನ ತ್ಯಾಜ್ಯ ವಸ್ತು ನಿರ್ವಹಣೆಗೆ ಅಗತ್ಯ ಜಾಗದ ಕೊರತೆ, ಹೊಸದಾಗಿ ಸೃಜನೆಯಾಗಿರುವ ಪಟ್ಟಣಗಳಲ್ಲಿ ತ್ಯಾಜ್ಯ ನಿರ್ವಹಣೆಯಲ್ಲಿ ವ್ಯವಸ್ಥೆ ಇಲ್ಲದಿರುವುದು ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕ ಸಹಭಾಗಿತ್ವದ ಕೊರತೆ<br>5. ಬೀದಿ ದೀಪಗಳ ಕೊರತೆ<br>6. ಸಿಬ್ಬಂದಿ ಕೊರತೆ |
| ಇ | ಇವುಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ನಗರ ಸ್ಥಳೀಯ ಸಂಸ್ಥೆಗಳು ಅನುಭವಿಸುತ್ತಿರುವ ಪ್ರಮುಖ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:<br><br>ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಗನುಗುಣವಾಗಿ ನೀಗಿಸಲು ಸರ್ಕಾರದ ವಿವಿಧ ಯೋಜನೆಗಳಾದ ನಗರೋತ್ಥಾನ ಮುನಿಸಿಪಾಲಿಟಿ 3ನೇ ಹಂತ, 14 ಮತ್ತು 15ನೇ ಹಣಕಾಸು ಆಯೋಗದ ಅನುದಾನ, ಕೇಂದ್ರ ಪುರಸ್ಕೃತ ಅಮೃತ್ ಯೋಜನೆ, ಎಸ್.ಎಫ್.ಸಿ ಮುಕ್ತನಿಧಿ, |

ಎಸ್.ಎಫ್.ಸಿ ವಿಶೇಷ ಅನುದಾನ ಹಾಗೂ ಎಸ್.ಎಫ್.ಸಿ ಕುಡಿಯುವ ನೀರು ಅನುದಾನ, ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆ, ಮಲ ತ್ಯಾಜ್ಯ ಸಂಸ್ಕರಣಾ ನಿರ್ವಹಣೆ ಯೋಜನೆ (ಎಫ್ಎಸ್ಎಸ್ಎಂ) ಸ್ವಚ್ಛ ಭಾರತ್ ಯೋಜನೆಯಡಿ ಕಾರ್ಯಕ್ರಮಗಳನ್ನು ರೂಪಿಸಲಾಗಿರುತ್ತದೆ.

**1. ಕುಡಿಯುವ ನೀರು ಸರಬರಾಜು:**

ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು 2015–16ನೇ ಸಾಲಿನಿಂದ 2019–20ನೇ ಸಾಲಿಗೆ **14ನೇ ಹಣಕಾಸು ಆಯೋಗದ ಯೋಜನೆ ಅನುದಾನವನ್ನು** ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಆಯಾ ವರ್ಷಗಳಲ್ಲಿ ಹಂಚಿಕೆಯಾದ ಗರಿಷ್ಠ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗೆ ಅವಶ್ಯಕತೆಗನುಗುಣವಾಗಿ ಬಳಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

2020–21ನೇ ಸಾಲಿನಲ್ಲಿ **15ನೇ ಹಣಕಾಸು ಆಯೋಗದ ಅನುದಾನದಲ್ಲಿ** ನಗರದಲ್ಲಿ ಹಂಚಿಕೆಯಾದ ಒಟ್ಟು ಅನುದಾನದಲ್ಲಿ ಶೇ.50ರಷ್ಟು ಅನುದಾನವು ನಿರ್ಭಂದಿತ ಅನುದಾನವಾಗಿದ್ದು, ಸದರಿ ಅನುದಾನದಲ್ಲಿ ಕುಡಿಯುವ ನೀರಿಗಾಗಿ ಶೇ.50ರಷ್ಟು ಮೀಸಲಿಟ್ಟು ಕುಡಿಯುವ ನೀರಿಗಾಗಿ ಬಳಸಲು ಕಡ್ಡಾಯಗೊಳಿಸಲಾಗಿದೆ.

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು **ಎಸ್.ಎಫ್.ಸಿ ಕುಡಿಯುವ ನೀರಿನಿಂದ** ಸಮಸ್ಯೆಗಳಿರುವ ನಗರಗಳಿಗೆ/ಪಟ್ಟಣಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದ್ದು, ಸದರಿ ಅನುದಾನವನ್ನು ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ನಗರಗಳ ವ್ಯಾಪ್ತಿಯಲ್ಲಿ ಬಳಸಲಾಗುತ್ತಿದೆ.

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ** ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಿ ನಗರಾಭಿವೃದ್ಧಿ ಇಲಾಖೆಯಿಂದ ಮಂಜೂರಾದ ಕುಡಿಯುವ ನೀರಿನ ಯೋಜನೆಗಳನ್ನು ರಾಜ್ಯ ಸರ್ಕಾರದ ಅನುದಾನದಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಬಾಹ್ಯ ನೆರವಿನ ಯೋಜನೆಯಡಿ **ಕೆಯುಐಡಿಎಫ್‌ಸಿ** ವತಿಯಿಂದ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಕೆಲವು ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

2015–16ನೇ ಸಾಲಿನಿಂದ 2020–21ನೇ ಸಾಲಿನವರೆಗೆ **ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ** ಆಯ್ಕೆಯಾದ 26 (ಬಿಬಿಎಂಪಿ ಹೊರತುಪಡಿಸಿ) ನಗರ ಪೈಕಿ 19 ನಗರಗಳಲ್ಲಿ ರೂ.1488.17 ಕೋಟಿ ಮೊತ್ತದ 33 ನೀರು ಸರಬರಾಜು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

**2.ಒಳಚರಂಡಿ ಮತ್ತು ಸೆಪ್ಟೇಜ್ ನಿರ್ವಹಣೆ:**

2015–16ನೇ ಸಾಲಿನಿಂದ 2019–20ನೇ ಸಾಲಿನವರೆಗೆ **14ನೇ ಹಣಕಾಸು ಆಯೋಗದ ಅನುದಾನವನ್ನು** ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಆಯಾ ವರ್ಷಗಳಲ್ಲಿ ಹಂಚಿಕೆಯಾದ ಗರಿಷ್ಠ ಮೊತ್ತವನ್ನು ಸಾಮೂಹಿಕ ಶೌಚಾಲಯ ಮತ್ತು ನೈರ್ಮಲ್ಯ ವ್ಯವಸ್ಥೆಗಳಿಗೆ ಬಳಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

2020–21ನೇ ಸಾಲಿನ **15ನೇ ಹಣಕಾಸು ಆಯೋಗದ** ಅನುದಾನದಲ್ಲಿ ನಗರದಲ್ಲಿ ಹಂಚಿಕೆಯಾದ ಒಟ್ಟು ಅನುದಾನದಲ್ಲಿ ಶೇ.50ರಷ್ಟು ಅನುದಾನವು ಮುಕ್ತ ಅನುದಾನವಾಗಿದ್ದು, ಸದರಿ ಅನುದಾನದಲ್ಲಿ ಗರಿಷ್ಠ ಶೇ.20ರಷ್ಟು ಮೀರದಂತೆ ಒಳಚರಂಡಿ ಮತ್ತು ಸೆಪ್ಟೇಜ್ ನಿರ್ವಹಣೆಗಾಗಿ ಬಳಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಅದರಂತೆ, ನಗರಸ್ಥಳೀಯ ಸಂಸ್ಥೆಗಳು ತಮ್ಮ ನಗರದ ಅವಶ್ಯಕತೆಗನುಗುಣವಾಗಿ ಮತ್ತು ಅನುದಾನದ ಲಭ್ಯತೆಗನುಗುಣವಾಗಿ ಒಳಚರಂಡಿ ಮತ್ತು ಸೆಪ್ಟೇಜ್ ನಿರ್ವಹಣೆ ಮತ್ತು ನೈರ್ಮಲ್ಯ ಕಾಮಗಾರಿಗಳನ್ನು ಕೈಗೊಳ್ಳುತ್ತಿವೆ.

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ** ವತಿಯಿಂದ ಒಳಚರಂಡಿ ಯೋಜನೆಗಳನ್ನು ರೂಪಿಸಿ ನಗರಾಭಿವೃದ್ಧಿ ಇಲಾಖೆಯಿಂದ ಮಂಜೂರಾದ ಒಳಚರಂಡಿ ಯೋಜನೆಗಳನ್ನು ರಾಜ್ಯ ಸರ್ಕಾರದ ಅನುದಾನದಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಬಾಹ್ಯ ನೆರವಿನ ಯೋಜನೆಯಡಿ **ಕೆಯುಐಡಿಎಫ್‌ಸಿ** ವತಿಯಿಂದ ಒಳಚರಂಡಿ ಯೋಜನೆಯನ್ನು ಕೆಲವು ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ** ಆಯ್ಕೆಯಾದ 26 (ಬಿಬಿಎಂಪಿ ಹೊರತುಪಡಿಸಿ) ನಗರ ಪೈಕಿ 19 ನಗರಗಳಲ್ಲಿ ರೂ.1601.18ಕೋಟಿ ಮೊತ್ತದ 34 ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಯು.ಜಿ.ಡಿ ವ್ಯವಸ್ಥೆ ಇಲ್ಲದ ಹಾಗೂ 50,000 ಸಾವಿರ ಜನ ಸಂಖ್ಯೆಗಿಂತ ಕಡಿಮೆ ಜನರಿರುವ ಪಟ್ಟಣಗಳಲ್ಲಿ ಯು.ಜಿ.ಡಿ ವ್ಯವಸ್ಥೆಯಾಗುವರೆವಿಗೂ **ಮಲ ತ್ಯಾಜ್ಯ ನಿರ್ವಹಣೆ ಯೋಜನೆ** (Faecal Sludge & Septage Management) ವ್ಯವಸ್ಥೆಯನ್ನು ಕಲ್ಪಿಸಲು ಯೋಜಿಸಲಾಗಿದ್ದು, ಈ ನಿಟ್ಟಿನಲ್ಲಿ 50 ಪಟ್ಟಣಗಳಲ್ಲಿ FSSM ಘಟಕಗಳನ್ನು ಸ್ಥಾಪಿಸಲು 2018–19ನೇ ಸಾಲಿನಲ್ಲಿ ರೂ.167.05 ಕೋಟಿ ಸರ್ಕಾರದಿಂದ ಅನುಮೋದನೆಯಾಗಿರುತ್ತದೆ. ಸದರಿ ಪಟ್ಟಣಗಳಲ್ಲಿ ಡಿ.ಪಿ.ಆರ್‌ಗಳನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗಿದೆ.

| | | |
|---|---|---|
| | | **3. ರಸ್ತೆ ಮತ್ತು ಚರಂಡಿ ಕೊರತೆ:**<br>ರಸ್ತೆ ಮತ್ತು ಚರಂಡಿ ಕೊರತೆ ಪರಿಹರಿಸಲು 2015–16ನೇ ಸಾಲಿನಿಂದ 2019–20ನೇ ಸಾಲಿಗೆ **14ನೇ ಹಣಕಾಸು ಆಯೋಗದ** ಅನುದಾನವನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಆಯಾ ವರ್ಷಗಳಲ್ಲಿ ಹಂಚಿಕೆಯಾದ ಅನುದಾನದಲ್ಲಿ ನಗರ ಸ್ಥಳೀಯ ಸಂಸ್ಥೆಗೆ ಅವಶ್ಯಕತೆಗನುಗುಣವಾಗಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕಾಗಿ ಗರಿಷ್ಠ ಶೇ.40 ರಷ್ಟು ಮೀರದಂತೆ ಬಳಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.<br><br>2020–21ನೇ ಸಾಲಿನ **15ನೇ ಹಣಕಾಸು ಆಯೋಗದಲ್ಲಿ** ನಗರದಲ್ಲಿ ಹಂಚಿಕೆಯಾದ ಒಟು ಅನುದಾನದಲ್ಲಿ ಶೇ.50ರಷ್ಟು ಅನುದಾನವು ಮುಕ್ತ ಅನುದಾನವಾಗಿದ್ದು, ಸದರಿ ಅನುದಾನದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕಾಗಿ ಮುಕ್ತ ಅನುದಾನದ ಗರಿಷ್ಠ ಶೇ.20ರಷ್ಟು ಮೀರದಂತೆ ಬಳಸಲು ಕಡ್ಡಾಯಗೊಳಿಸಲಾಗಿದೆ.<br><br>**ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ** ಆಯ್ಕೆಯಾದ 26 (ಬಿಬಿಎಂಪಿ ಹೊರತುಪಡಿಸಿ) ನಗರ ಪೈಕಿ 13 ನಗರಗಳಲ್ಲಿ ರೂ.254.02ಕೋಟಿ ಮೊತ್ತದ 84 ಮಳೆ ಚರಂಡಿ ಕಾಮಗಾರಿಗಳನ್ನು ಕೈಗೊಂಡಿದೆ.<br><br>**ಎಸ್.ಎಫ್.ಸಿ ಮುಕ್ತ ಅನುದಾನದಲ್ಲಿ** ರಸ್ತೆ ಮತ್ತು ಚರಂಡಿಗಾಗಿ ಅನುದಾನವನ್ನು ಬಳಸಲು ಮಾರ್ಗಸೂಚಿ ಹೊರಡಿಸಲಾಗಿದ್ದು, ಅದರಂತೆ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ನಗರದ ಅವಶ್ಯಕತೆಗನುಗುಣವಾಗಿ ಮತ್ತು ಅನುದಾನದ ಲಭ್ಯತೆಗನುಗುಣವಾಗಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>**ನಗರೋತ್ಥಾನ (ಮುನಿಸಿಪಾಲಿಟಿ) ಹಂತ** 3ರ ಯೋಜನೆಯಡಿ ರಾಜ್ಯದ 264 ನಗರ ಸ್ಥಳೀಯ ಸಂಸ್ಥೆಗಳಿಗೆ 2016–17ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿದ್ದು, ಸದರಿ ಯೋಜನೆಯಡಿಯಲ್ಲಿ ರೂ.1232.02 ಕೋಟಿ ಮೊತ್ತದ 2178 ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೊಂಡಿದೆ.<br><br>**4. ಘನತ್ಯಾಜ್ಯ ವಸ್ತು ನಿರ್ವಹಣೆ ಯೋಜನಾ ಅನುಷ್ಠಾನದಲ್ಲಿನ ಸಮಸ್ಯೆಗಳ ನಿರ್ವಹಣೆಗೆ ಕ್ರಮ:**<br><br>ಸಮಗ್ರ ಘನ ತ್ಯಾಜ್ಯ ವಸ್ತು ನಿರ್ವಹಣೆ ಯೋಜನೆಯ ಅನುಷ್ಠಾನವನ್ನು ಖಾತರಿಗೊಳಿಸುವ ನಿಟ್ಟಿನಲ್ಲಿ ಕೆಳಕಂಡ |

| | | |
|---|---|---|
| | | ಕ್ರಮಗಳನ್ನು ಕೈಗೊಳ್ಳಲಾಗಿದೆ;<br><br>ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಲವಾರು ವರ್ಷಗಳಿಂದ ಸಂಸ್ಕರಣೆ ಸೌಲಭ್ಯವಿಲ್ಲದ ಕಾರಣ ನೆಲಭರ್ತಿ ಜಾಗಗಳಲ್ಲಿ ಬೃಹತ್ ಪ್ರಮಾಣದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯ **(legacy waste)** ವನ್ನು ನಿಯಮಾನುಸಾರ ವಿಲೇ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಈ ಸಂಬಂಧ ಕ್ರಿಯಾ ಯೋಜನೆಗಳನ್ನು ಸಲ್ಲಿಸುವಂತೆ ಯೋಜನಾ ನಿರ್ದೇಶಕರುಗಳಿಗೆ ದಿನಾಂಕ 26-2-2021 ರಂದು ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br><br>ನೆಲಭರ್ತಿ ಜಾಗದ ಲಭ್ಯತೆ ಇಲ್ಲದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯ ಸರ್ಕಾರಿ ಜಾಗವನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ, ಸರ್ಕಾರಿ ಜಮೀನು ಲಭ್ಯವಿಲ್ಲದ ಪಕ್ಷದಲ್ಲಿ ಖಾಸಗಿ ಜಮೀನನ್ನು ನಿಯಮಾನುಸಾರ ನಗರಗಳು ಖರೀದಿಸಬಹುದಾಗಿರುತ್ತದೆ.<br><br>ಸಮಗ್ರ ಘನ ತ್ಯಾಜ್ಯ ನಿರ್ವಹಣೆ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ 219 ಡಿ.ಪಿ.ಆರ್‌ಗಳಿಗೆ ಅನುಮೋದನೆ ನೀಡಲಾಗಿದ್ದು ಉಳಿಕೆ 70 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಡಿ.ಪಿ.ಆರ್ ಗಳನ್ನು ಸಿದ್ಧಪಡಿಸಿ ನಿರ್ದೇಶನಾಲಯಕ್ಕೆ ಅನುಮೋದನೆಗಾಗಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಎಸ್.ಬಿ.ಎಮ್ ಮಾರ್ಗಸೂಚಿಗಳ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಂತಿಕೆಯನ್ನು ಬಿಡುಗಡೆ ಮಾಡಲಾಗುವುದು.<br><br>ತ್ಯಾಜ್ಯ ನಿರ್ವಹಣೆ ಹಾಗೂ ಬಯಲು ಶೌಚ ಮುಕ್ತ ನಗರಗಳ ನಿರ್ವಹಣೆಯಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಖಾತರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ IEC ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ರೂ.30.33 ಕೋಟಿಗಳ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಇದುವರೆವಿಗೂ ಬಿಡುಗಡೆ ಮಾಡಲಾಗಿದೆ.<br><br>**<u>5.ಬೀದಿ ದೀಪ ಸಮಸ್ಯೆ:</u>**<br>ನಗರದ ಹಲವು ಪ್ರದೇಶಗಳಲ್ಲಿ ಬೀದಿ ದೀಪಗಳು ಇಲ್ಲದಿರುವ ಕಾರಣ ಬೆಳಕು ಇಲ್ಲದ ಸ್ಥಳಗಳು ಇರುತ್ತವೆ. ಹಾಗು ಬೀದಿ ದೀಪ ಚಾಲನೆ ಮತ್ತು ನಿರ್ವಹಣೆಯನ್ನು ಮ್ಯಾನುಯಲ್ ಆಗಿ ಮಾಡುತ್ತಿರುವುದರಿಂದ ದೂರುಗಳ ನಿರ್ವಹಣೆಯಲ್ಲಿ ವಿಳಂಬ, ಹೆಚ್ಚುವರಿ ವಿದ್ಯುತ್ ಬಳಕೆ ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಗಿರುತ್ತದೆ. |

| | | |
|---|---|---|
| | | ಹಾಲಿ ಇರುವ ಸಾಂಪ್ರದಾಯಿಕ ಬೀದಿ ದೀಪಗಳನ್ನು ಬದಲಿಸಿ, ಕೇಂದ್ರಿಕೃತ ಚಾಲನೆ ಮತ್ತು ನಿರ್ವಹಣೆಯುಳ್ಳ ಇಂಧನ ಕ್ಷಮೆತೆಯ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸುವ ಯೋಜನೆಯನ್ನು ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯ ಅನುಷ್ಠಾನದಿಂದ ಬೀದಿ ದೀಪಗಳನ್ನು IS-1944 Lux ಪರಿಮಾಣದ ಆಧಾರದ ಮೇಲೆ ಅಳವಡಿಸಲಾಗಿರುತ್ತದೆ. ಎಲ್ಇಡಿ ಬೀದಿ ದೀಪಗಳನ್ನು ಉಪಯೋಗಿಸುವುದರಿಂದ ಶೇ.45–55ರಷ್ಟು ವಿದ್ಯುತ್ ಉಳಿತಾಯವಾಗುತ್ತದೆ. ಕೇಂದ್ರೀಕೃತ ಚಾಲನೆ ಮತ್ತು ನಿರ್ವಹಣೆಯಿಂದ Real Time online monitoring ಹಾಗು ದೂರು ನಿರ್ವಹಣೆ ಸಾಧ್ಯವಾಗುವುದರಿಂದ, ಸಾರ್ವಜನಿಕರಿಗೆ ಉತ್ತಮ ಸೇವೆ ದೊರೆಯುತ್ತದೆ.<br><br>**6. ಸಿಬ್ಬಂದಿ ಕೊರತೆ:**<br><br>ಮೇಲ್ದರ್ಜೆಗೇರಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಾಗೂ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ವರ್ಗಾವಣೆ, ಮುಂಬಡ್ತಿ, ನಿವೃತ್ತಿ ಹಾಗೂ ಇತರೆ ಕಾರಣಗಳಿಂದ ಹುದ್ದೆಗಳು ಖಾಲಿಯಾಗುತ್ತಿರುವುದರಿಂದ, ನೇರ ನೇಮಕಾತಿ ಅಡಿಯಲ್ಲಿ ಖಾಲಿ ಇರುವ ಗ್ರೂಪ್ ಬಿ ವೃಂದದ 04 ಹುದ್ದೆಗಳು ಮತ್ತು ಗ್ರೂಪ್ ಸಿ ವೃಂದದ 526 ಹುದ್ದೆಗಳನ್ನು ಒಳಗೊಂಡಂತೆ ಒಟ್ಟು 530 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿರುತ್ತದೆ. ಸದರಿ ಹುದ್ದೆಗಳ ಪೈಕಿ ಕರ್ನಾಟಕ ಲೋಕಸೇವಾ ಆಯೋಗದಿಂದ ಒಟ್ಟು 109 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>ಮುಂದುವರೆದು, ಜಿಲ್ಲಾ ಮಟ್ಟದಲ್ಲಿ ಮುಂಬಡ್ತಿ ಖೋಟಾದಡಿಯಲ್ಲಿ ವಿವಿಧ "ಸಿ" ವೃಂದದ ಖಾಲಿ ಹುದ್ದೆಗೆ ಮುಂಬಡ್ತಿಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶನಾಲಯದಿಂದ ಖಾಲಿ ಇರುವ ಹುದ್ದೆಗಳನ್ನು ನಿಯಮನುಸಾರ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. |
| ಈ | ಧೂಳು, ವಾಸನೆ ಬರುವ ಚರಂಡಿಗಳು ಕಸ ಮತ್ತು ಹಂದಿಗಳ ಸಮಸ್ಯೆಗಳಿಂದ ಜನತೆಗೆ ಯಾವ ರೀತಿಯಲ್ಲಿ ಸರ್ಕಾರ ಮುಕ್ತಿಗೊಳಿಸುತ್ತಿದೆ? (ವಿವರ ನೀಡುವುದು) | ನಗರಗಳು ತಮ್ಮ ವ್ಯಾಪ್ತಿಯಲ್ಲಿ ಧೂಳಿನ ಪ್ರಮಾಣ ಕಡಿಮೆ ಮಾಡುವ ನಿಟ್ಟಿನಲ್ಲಿ ಧೂಳು ಹೆಚ್ಚಾಗಿರುವ ಪ್ರದೇಶಗಳಲ್ಲಿ ರಸ್ತೆ ಗುಡಿಸುವ ಮೊದಲು ನೀರನ್ನು ಸಿಂಪಡಿಸಲು, ರಸ್ತೆ ಬದಿಯಲ್ಲಿ ಸಣ್ಣ ಗಿಡಗಳು ಹಾಗೂ ಹುಲ್ಲುಗಳನ್ನು ಬೆಳೆಸುವುದು, ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಧೂಳು ತಗ್ಗಿಸಲು ಕ್ರಮ, ರಾಜ್ಯದ ನಗರ ಪ್ರದೇಶಗಳಲ್ಲಿ ತ್ಯಾಜ್ಯ ಸುಡುವುದನ್ನು ನಿಷೇಧಿಸಲಾಗಿದ್ದು, |

| | | |
|---|---|---|
| | | ಉಲ್ಲಂಘಿತರ ವಿರುದ್ಧ ಗರಿಷ್ಠ ರೂ.25,000/- ದಂಡವನ್ನು ವಿಧಿಸಿ ವಸೂಲಿ ಮಾಡಲು ಕ್ರಮ ವಹಿಸುವಂತೆ ಪೌರಾಡಳಿತ ನಿರ್ದೇಶನಾಲಯದಿಂದ ಸೂಚನೆಗಳನ್ನು ನೀಡಲಾಗಿರುತ್ತದೆ.<br><br>ಚರಂಡಿಗಳಲ್ಲಿ ತ್ಯಾಜ್ಯ ತುಂಬಿದ್ದಲ್ಲಿ ವಾಸನೆ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವುದರಿಂದ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆಯನ್ನು ಪ್ರಾರಂಭಿಸಲಾಗಿರುತ್ತದೆ. ಉಳಿದಂತೆ ತ್ಯಾಜ್ಯವನ್ನು ಚರಂಡಿಗಳಲ್ಲಿ, ತೆರೆದ ಪ್ರದೇಶಗಳಲ್ಲಿ ಎಸೆಯುವವರ ವಿರುದ್ಧ ದಂಡ ವಿಧಿಸಲು ಕ್ರಮ ವಹಿಸಿದೆ (ಶೆಡ್ಯೂಲ್ VIII of Model SWM byelaw published on 9-10-2020 State Gazette).<br><br>ತ್ಯಾಜ್ಯವನ್ನು ಎಲ್ಲೆಂದರಲ್ಲಿ ಹರಡಿದ್ದಲ್ಲಿ ಮತ್ತು ಚರಂಡಿಗಳು ತುಂಬಿ ಹೊರಚೆಲ್ಲಿರುವ ಸ್ಥಳಗಳಲ್ಲಿ ಹಂದಿಗಳ ಕಾಟ ಹೆಚ್ಚಾಗಿರುವುದನ್ನು ಗಮನಿಸಿದ್ದು, ಇದಕ್ಕಾಗಿ ವ್ಯವಸ್ಥಿತ ತಾಜ್ಯ ಸಂಗ್ರಹಣೆ, ಸಾಗಣೆ ಮತ್ತು ನಿರ್ವಹಣೆಗೆ ಪ್ರಮುಖ ಪರಿಹಾರವಾಗಿರುತ್ತದೆ. ಈ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಕಾರ್ಯ ಪ್ರವೃತ್ತವಾಗಿರುತ್ತವೆ. ಹಾಲಿ ರಾಜ್ಯದಲ್ಲಿ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಶೇ.98ರಷ್ಟು ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ, ಶೇ.71ರಷ್ಟು ತ್ಯಾಜ್ಯ ವಿಂಗಡಣೆ ಮತ್ತು ತ್ಯಾಜ್ಯ ಸಂಸ್ಕರಣೆಯಲ್ಲಿ ಶೇ.52ರಷ್ಟು ಪ್ರಗತಿ ಸಾಧಿಸಲಾಗಿದೆ.<br><br>ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಅಡಚಣೆಯಾಗದಂತೆ ನಗರ/ಪಟ್ಟಣಗಳ ಹೊರಭಾಗದಲ್ಲಿ ಹಂದಿ ಸಾಗಾಣಿಕೆಗೆ ಸಹಾಯವಾಗುವ ಸೂಕ್ತ ಸ್ಥಳವನ್ನು ಗುರುತಿಸಿ ಶೇ.24.10 ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಕ್ರಮವಹಿಸಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪೌರಾಡಳಿತ ನಿರ್ದೇಶನಾಲಯದ ಪತ್ರ ದಿನಾಂಕ:26.11.2020ರಲ್ಲಿ ನಿರ್ದೇಶನ ನೀಡಲಾಗಿದೆ. |

ಸಂಖ್ಯೆ: ನಅಇ 43 ಜಿಇಎಲ್ 2021

(ಎನ್.ನಾಗರಾಜ್, ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

# ಅನುಬಂಧ - 01

ರಾಜ್ಯದ ಎಲ್ಲಾ ಮಹಾನಗರಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಪಟ್ಟಿ

| ಕ್ರ. ಸಂ. | ಜಿಲ್ಲೆಯ ಹೆಸರು | ಮಹಾನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
|---|---|---|---|---|---|
| 1 | ಬೆಂಗಳೂರು ನಗರ | | ಹೆಬ್ಬಗೋಡಿ | ಆನೇಕಲ್ | ದೊಡ್ಡತೋಗೂರು |
| | | | | ಬೊಮ್ಮಸಂದ್ರ | |
| | | | | ಜಿಗಣಿ | |
| | | | | ಚಂದಾಪುರ | |
| | | | | ಅತ್ತೀಬೆಲೆ | |
| | | | | ಕೋನಪ್ಪನ ಅಗ್ರಹಾರ | |
| | | | | ಮಾದನಾಯಕನಹಳ್ಳಿ | |
| | | | | | |
| 2 | ಬೆಂಗಳೂರು ಗ್ರಾಮಾಂತರ | | ದೊಡ್ಡಬಳ್ಳಾಪುರ | ದೇವನಹಳ್ಳಿ | ಬಾಶೆಟ್ಟಿಹಳ್ಳಿ |
| | | | ಹೊಸಕೋಟೆ | ವಿಜಯಪುರ | |
| | | | ನೆಲಮಂಗಲ | | |
| | | | | | |
| 3 | ರಾಮನಗರ | | ರಾಮನಗರ | ಮಾಗಡಿ | ರಾಮೋಹಳ್ಳಿ |
| | | | ಚನ್ನಪಟ್ಟಣ | ಬಿಡದಿ | |
| | | | ಕನಕಪುರ | | |
| | | | | | |
| 4 | ತುಮಕೂರು | ತುಮಕೂರು | ತಿಪಟೂರು | ಕುಣಿಗಲ್ | ಕೊರಟಗೆರೆ |
| | | | ಶಿರಾ | ಚಿ.ನಾ.ಹಳ್ಳಿ | ಗುಬ್ಬಿ |
| | | | | ಮಧುಗಿರಿ | ತುರುವೇಕೆರೆ |
| | | | | ಪಾವಗಡ | ಹುಳಿಯಾರು |
| | | | | | |
| 5 | ಕೋಲಾರ | | ಕೋಲಾರ | ಬಂಗಾರಪೇಟೆ | ವೇಮಗಲ್-ಕುರುಗಲ್ |
| | | | ಕೆಜಿಎಫ್ | ಮಾಲೂರು | |
| | | | ಮುಳಬಾಗಿಲು | ಶ್ರೀನಿವಾಸಪುರ | |
| | | | | | |
| 6 | ಚಿಕ್ಕಬಳ್ಳಾಪುರ | | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಗುಡಿಬಂಡೆ |
| | | | ಚಿಂತಾಮಣಿ | | |
| | | | ಶಿಡ್ಲಘಟ್ಟ | | |
| | | | ಗೌರಿಬಿದನೂರು | | |
| | | | | | |
| 7 | ಚಿತ್ರದುರ್ಗ | | ಚಿತ್ರದುರ್ಗ | ಹೊಸದುರ್ಗ | ಹೊಳಲ್ಕೆರೆ |
| | | | ಚಳ್ಳಕೆರೆ | | ಮೊಳಕಾಲ್ಮೂರು |
| | | | ಹಿರಿಯೂರು | | ನಾಯಕನಹಟ್ಟಿ |
| | | | | | |
| 8 | ದಾವಣಗೆರೆ | ದಾವಣಗೆರೆ | ಹರಿಹರ | ಚನ್ನಗಿರಿ | ಜಗಳೂರು |
| | | | | ಮಲೇಬೆನ್ನೂರು | ಹೊನ್ನಾಳಿ |
| | | | | | ನ್ಯಾಮತಿ |
| | | | | | |

| | | | | | |
|---|---|---|---|---|---|
| 9 | ಶಿವಮೊಗ್ಗ | ಶಿವಮೊಗ್ಗ | ಭದ್ರಾವತಿ | ಶಿಕಾರಿಪುರ | ತೀರ್ಥಹಳ್ಳಿ |
| | | | ಸಾಗರ | ಶಿರಾಳಕೊಪ್ಪ | ಹೊಸನಗರ |
| | | | | ಸೊರಬ | ಜೋಗ್-ಕಾರ್ಗಲ್ |
| | | | | | ಆನವಟ್ಟಿ |
| | | | | | ಹೊಳೆಹೊನ್ನೂರು |
| | | | | | |
| 10 | ಮೈಸೂರು ಜಿಲ್ಲೆ | ಮೈಸೂರು | ಹುಣಸೂರು | ಕೆ.ಆರ್.ನಗರ | ಸರಗೂರು |
| | | | ನಂಜನಗೂಡು | ಬನ್ನೂರು | |
| | | | | ಟಿ.ನರಸೀಪುರ | |
| | | | | ಪಿರಿಯಾಪಟ್ಟಣ | |
| | | | | ಹೆಚ್.ಡಿ.ಕೋಟೆ | |
| | | | | | |
| 11 | ಚಾಮರಾಜನಗರ | | ಚಾಮರಾಜನಗರ | ಗುಂಡ್ಲುಪೇಟೆ | ಯಳಂದೂರು |
| | | | ಕೊಳ್ಳೇಗಾಲ | | ಹನೂರು |
| | | | | | |
| 12 | ಮಂಡ್ಯ | | ಮಂಡ್ಯ | ಮದ್ದೂರು | ಬೆಳ್ಳೂರು |
| | | | | ಮಳವಳ್ಳಿ | |
| | | | | ಶ್ರೀರಂಗಪಟ್ಟಣ | |
| | | | | ಕೆ.ಆರ್.ಪೇಟೆ | |
| | | | | ಪಾಂಡವಪುರ | |
| | | | | ನಾಗಮಂಗಲ | |
| | | | | | |
| 13 | ಹಾಸನ ಜಿಲ್ಲೆ | | ಹಾಸನ | ಬೇಲೂರು | ಅರಕಲಗೂಡು |
| | | | ಅರಸೀಕೆರೆ | ಚನ್ನರಾಯಪಟ್ಟಣ | ಆಲೂರು |
| | | | | ಹೊಳೆನರಸೀಪುರ | |
| | | | | ಸಕಲೇಶಪುರ | |
| | | | | | |
| 14 | ಕೊಡಗು | | ಮಡಿಕೇರಿ | | ಕುಶಾಲನಗರ |
| | | | | | ಸೋಮವಾರಪೇಟೆ |
| | | | | | ವಿರಾಜಪೇಟೆ |
| | | | | | |
| 15 | ಚಿಕ್ಕಮಗಳೂರು | | ಚಿಕ್ಕಮಗಳೂರು | ಕಡೂರು | ನರಸಿಂಹರಾಜಪುರ |
| | | | | ಬೀರೂರು | ಕೊಪ್ಪ |
| | | | | ತರೀಕೆರೆ | ಶೃಂಗೇರಿ |
| | | | | | ಮೂಡಿಗೆರೆ |
| | | | | | ಅಜ್ಜಂಪುರ |
| | | | | | |

| | | | | | |
|---|---|---|---|---|---|
| 16 | ದಕ್ಷಿಣ ಕನ್ನಡ | ಮಂಗಳೂರು | ಉಳ್ಳಾಲ | ಬಂಟ್ವಾಳ | ಬೆಳ್ತಂಗಡಿ |
| | | | ಪುತ್ತೂರು | ಮೂಡಬಿದರೆ | ಸುಳ್ಯ |
| | | | | ಸೋಮೇಶ್ವರ | ಮುಲ್ಕಿ |
| | | | | | ವಿಟ್ಲ |
| | | | | | ಕೋಟೆಕಾರು |
| | | | | | ಕಡಬ |
| | | | | | ಬಜಪೆ |
| | | | | | |
| 17 | ಉಡುಪಿ | | ಉಡುಪಿ | ಕಾರ್ಕಳ | ಸಾಲಿಗ್ರಾಮ |
| | | | | ಕುಂದಾಪುರ | ಬೈಂದೂರು |
| | | | | ಕಾಪು | |
| | | | | | |
| 18 | ಬೆಳಗಾವಿ | ಬೆಳಗಾವಿ | ನಿಪ್ಪಾಣಿ | ಸವದತ್ತಿ | ಖಾನಾಪೂರ |
| | | | ಗೋಕಾಕ | ಸಂಕೇಶ್ವರ | ರಾಯಬಾಗ |
| | | | | ಚಿಕ್ಕೋಡಿ | ಕಂಕನವಾಡಿ |
| | | | | ಬೈಲಹೊಂಗಲ | ಎಂ.ಕೆ.ಹುಬ್ಬಳ್ಳಿ |
| | | | | ರಾಮದುರ್ಗ | ನಾಗನೂರ |
| | | | | ಮೂಡಲಗಿ | ಚಿಂಚಲಿ |
| | | | | ಅಥಣಿ | ಯಕ್ಸಾಂಬ |
| | | | | ಹುಕ್ಕೇರಿ | ಚೆನ್ನಮ್ಮ ಕಿತ್ತೂರ |
| | | | | ಸದಲಗಾ | ಕಲ್ಲೋಳಿ |
| | | | | ಕುಡಚಿ | ಐನಾಪುರ |
| | | | | ಮುಗಳಖೋಡ | ಶೇಡಬಾಳ |
| | | | | ಮುನವಳ್ಳಿ | ಕಬ್ಬೂರ |
| | | | | ಉಗಾರಖುರ್ದ್ | ಬೋರಗಾಂವ |
| | | | | ಕೊಣ್ಣೂರು | ಅರಂಭಾವಿ |
| | | | | ಹಾರೋಗೇರಿ | ಕಾಗವಾಡ |
| | | | | ಮಲ್ಲಾಪೂರ ಪಿ.ಜಿ. | ಯರಗಟ್ಟಿ |
| | | | | | |
| 19 | ಉತ್ತರಕನ್ನಡ | | ಕಾರವಾರ | ಭಟ್ಕಳ | ಹೊನ್ನಾವರ |
| | | | ಶಿರಸಿ | ಕುಮಟಾ | ಸಿದ್ದಾಪುರ |
| | | | ದಾಂಡೇಲಿ | ಅಂಕೋಲಾ | ಮುಂಡಗೋಡ |
| | | | | ಹಳಿಯಾಳ | ಯಲ್ಲಾಪುರ |
| | | | | | ಜಾಲಿ |
| | | | | | |

| | | | | | |
|---|---|---|---|---|---|
| 20 | ವಿಜಯಾಪುರ | ವಿಜಯಾಪುರ | | ಬಸವನ ಬಾಗೇವಾಡಿ | ಆಲಮೇಲ |
| | | | | ಮುದ್ದೇಬಿಹಾಳ | ಮನಗೂಳಿ |
| | | | | ತಾಳಿಕೋಟೆ | ಕೊಲ್ಹಾರ |
| | | | | ಸಿಂದಗಿ | ನಾಲತವಾಡ |
| | | | | ಇಂಡಿ | ನಿಡಗುಂದಿ |
| | | | | | ದೇವರಹಿಪ್ಪರಗಿ |
| | | | | | ಚಡಚಣ |
| | | | | | ತಿಕೋಟಾ |
| | | | | | |
| 21 | ಬಾಗಲಕೋಟೆ | | ಬಾಗಲಕೋಟ | ಮಹಾಲಿಂಗಪೂರ | ಕೆರೂರ |
| | | | ರಬಕವಿ–ಬನಹಟ್ಟಿ | ಗುಳೇದಗುಡ್ಡ | ಬೀಳಗಿ |
| | | | ಜಮಖಂಡಿ | ಬದಾಮಿ | ಅಮೀನಗಡ |
| | | | ಇಲಕಲ್ಲ | ತೇರದಾಳ | ಬೆಳಗಲಿ |
| | | | ಮುಧೋಳ | ಹುನಗುಂದ | ಕಮತಗಿ |
| | | | | | ಲೋಕಾಪುರ |
| | | | | | ಶಿರೂರು |
| | | | | | |
| 22 | ಧಾರವಾಡ | ಹುಬ್ಬಳ್ಳಿ–ಧಾರವಾಡ | | ಅಣ್ಣಿಗೇರಿ | ಅಳ್ನಾವರ |
| | | | | ನವಲಗುಂದ | ಕಲಘಟಗಿ |
| | | | | | ಕುಂದಗೋಳ |
| | | | | | |
| 23 | ಗದಗ | | ಗದಗ ಬೆಟಗೇರಿ | ಗಜೇಂದ್ರಗಡ | ಮುಳಗುಂದ |
| | | | | ಲಕ್ಷ್ಮೇಶ್ವರ | ನರೇಗಲ್ಲ |
| | | | | ಮುಂಡರಗಿ | ಶಿರಹಟ್ಟಿ |
| | | | | ನರಗುಂದ | |
| | | | | ರೋಣ | |
| | | | | | |
| 24 | ಹಾವೇರಿ | | ಹಾವೇರಿ | ಬ್ಯಾಡಗಿ | ಹಿರೇಕೆರೂರು |
| | | | ರಾಣೇಬೆನ್ನೂರ | ಹಾನಗಲ್ಲ | ಗುತ್ತಲ |
| | | | | ಸವಣೂರು | ರಟ್ಟೆಹಳ್ಳಿ |
| | | | | ಶಿಗ್ಗಾಂವ | |
| | | | | ಬಂಕಾಪುರ | |
| | | | | | |
| 25 | ಕಲಬುರ್ಗಿ | ಕಲಬುರ್ಗಿ | ಶಹಾಬಾದ | ಆಳಂದ | ಕಾಳಗಿ |
| | | | | ಚಿತ್ತಾಪುರ | ಕಮಲಾಪೂರ |
| | | | | ಸೇಡಂ | ಯಡ್ರಾಮಿ |
| | | | | ವಾಡಿ | |
| | | | | ಅಫಜಲಪೂರ | |
| | | | | ಚಿಂಚೋಳಿ | |
| | | | | ಜೇವರ್ಗಿ | |
| | | | | | |

| | | | | | |
|---|---|---|---|---|---|
| 26 | ಯಾದಗಿರಿ | | ಯಾದಗಿರಿ | ಗುರುಮಿಟ್ಕಲ್ | ಹುಣಸಗಿ |
| | | | ಶಹಪುರ | ಕಕ್ಕೇರಾ | |
| | | | ಸುರಪುರ | ಕಂಬಾವಿ | |
| | | | | | |
| | | | | | |
| 27 | ರಾಯಚೂರು | | ರಾಯಚೂರು | ಮಾನವಿ | ಕವಿತಾಳ |
| | | | ಸಿಂಧನೂರು | ದೇವದುರ್ಗ | ತುರುವಿಹಾಳ |
| | | | | ಲಿಂಗಸೂಗೂರು | ಬಳಗನೂರು |
| | | | | ಮುದಗಲ್ಲ | ಸಿರವಾರ |
| | | | | ಮಸ್ಕಿ | ಹಟ್ಟಿ |
| | | | | | ಜಾಲಹಳ್ಳಿ |
| | | | | | |
| 28 | ಕೊಪ್ಪಳ | | ಕೊಪ್ಪಳ | ಕುಷ್ಟಗಿ | ಯಲಬುರ್ಗಾ |
| | | | ಗಂಗಾವತಿ | ಕಾರಟಗಿ | ಕನಕಗಿರಿ |
| | | | | | ಕುಕನೂರ |
| | | | | | ತಾವರಗೇರ |
| | | | | | ಭಾಗ್ಯನಗರ |
| | | | | | |
| 29 | ಬೀದರ್ ಜಿಲ್ಲೆ | | ಬೀದರ | ಭಾಲ್ಕಿ | ಔರಾದ |
| | | | ಬಸವಕಲ್ಯಾಣ | ಹುಮನಾಬಾದ | |
| | | | | ಚಿಟಗುಪ್ಪಾ | |
| | | | | ಹಳ್ಳಿಖೇಡ | |
| | | | | | |
| 30 | ಬಳ್ಳಾರಿ | ಬಳ್ಳಾರಿ | ಹೊಸಪೇಟೆ | ಹೂವಿನಹಡಗಲಿ | ಕಮಲಾಪುರ |
| | | | ಸಿರುಗುಪ್ಪ | ಕಂಪ್ಲಿ | ಕೂಡ್ಲಿಗಿ |
| | | | | ಸಂಡೂರು | ಕೊಟ್ಟೂರು |
| | | | | ಕುರೇಕುಪ್ಪ | ತೆಕ್ಕಲಕೋಟೆ |
| | | | | ಕುರುಗೋಡು | ಕುಡುತಿನಿ |
| | | | | ಹಗರಿಬೊಮ್ಮನಹಳ್ಳಿ | ಮರಿಯಮ್ಮನಹಳ್ಳಿ |
| | | | | ಹರಪನಹಳ್ಳಿ | |
| | ಒಟ್ಟು | 10 | 59 | 120 | 110 |

**ಷರಾ:** ಕೋನಪ್ಪನ ಅಗ್ರಹಾರ ಮತ್ತು ದೊಡ್ಡತೋಗೂರು ಸ್ಥಳೀಯ ಸಂಸ್ಥೆಗಳ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ತಡೆಯಾಜ್ಞೆ ಇರುತ್ತದೆ.

Anitha
10/3

ಜಂಟಿ ನಿರ್ದೇಶಕರು(ಆ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು